# ಜಿಲ್ಲಾ ಪಂಚಾಯತ್ ರಾಮನಗರ
# ಗ್ರಾಮೀಣಾಭಿವೃದ್ದಿ ಕಾರ್ಯಕ್ರಮಗಳು

## ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಈ ಯೋಜನೆಯು ದಿನಾಂಕ:01/04/2008 ರಿಂದ ಜಿಲ್ಲೆಯಲ್ಲಿ ಜಾರಿಗೆ ಬಂದಿರುತ್ತದೆ. ಈ ಯೋಜನೆಯ ಉದ್ದೇಶ ಗ್ರಾಮೀಣ ಜನರು ಸ್ವಯಂ ಪ್ರೇರಣೆಯಿಂದ ಅರ್ಜಿ ಸಲ್ಲಿಸುವ ಮೂಲಕ ಅಕುಶಲ ದೈಹಿಕ ಕೆಲಸ ಬಯಸುವ ಗ್ರಾಮೀಣ ಪ್ರದೇಶದ ವಯಸ್ಕ ಸದಸ್ಯರ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ 100 ದಿನಗಳ ಖಾತರಿ ಉದ್ಯೋಗ ಒದಗಿಸಿ, ಅವರ ಜೀವನಕ್ಕೆ ಭದ್ರತೆ ಒದಗಿಸುವುದು ಮತ್ತು ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದು ಮತ್ತು ಗ್ರಾಮೀಣ ಬಡವರ ಜೀವನೋಪಾಯದ ಸಂಪನ್ಮೂಲ ಆಧಾರಗಳನ್ನು ಬಲಪಡಿಸುವುದು.

1. ದಿನಾಂಕ:01/04/2011ಕ್ಕೆ ರೂ.845.64ಲಕ್ಷ ಪ್ರಾರಂಭ ಶಿಲ್ಕು ಲಭ್ಯವಿರುತ್ತದೆ. ಸರ್ಕಾರದಿಂದ ರೂ.4062.60ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಈ ಪೈಕಿ 31.03.2012ರ ಅಂತ್ಯಕ್ಕೆ ಸರ್ಕಾರದಿಂದ ಬಿಡುಗಡೆಯಾಗಿರುವ ಹಣ ಪೂರ್ತಿ ವೆಚ್ಚವಾಗಿರುತ್ತದೆ.

ಅದರಂತೆ 2011–12ನೇ ಸಾಲಿಗೆ ಅರ್ಜಿಗಳು ನೊಂದಾಣೆಗಾಗಿ ಸ್ವೀಕೃತವಾಗಿದ್ದು, ಈ ಪೈಕಿ 1,34,119 ಕುಟುಂಬಗಳು ನೊಂದಣಿಯಾಗಿವೆ. 121781 ಉದ್ಯೋಗ ಚೀಟಿಗಳನ್ನು ವಿತರಿಸಲಾಗಿದೆ. 134402 ಬ್ಯಾಂಕ್ ಖಾತೆಗಳನ್ನು ತೆರೆಯಲಾಗಿದೆ. 36046 ಕುಟುಂಬಗಳು ಬೇಡಿಕೆ ಸಲ್ಲಿಸಿರುತ್ತಾರೆ. ಜಿಲ್ಲೆಯ 130 ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಒಟ್ಟು ರೂ.5774.97 ಕೋಟಿಗಳಿಗೆ (ಕ್ರಿಯಾ ಯೋಜನೆಯನ್ನು) ಸೆಲ್ಫ್ ಆಫ್ ಪ್ರಾಜೆಕ್ಟ್ ತಯಾರಿಸಲಾಗಿದೆ. ಒಟ್ಟು 6399 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. 1640460 ಮಾನವ ದಿನಗಳನ್ನು ಸೃಜಿಸಲಾಗಿದೆ. 100 ದಿನಗಳು ಪೂರ್ಣ ಉದ್ಯೋಗ ನೀಡಿದ ಕುಟುಂಬಗಳ ಸಂಖ್ಯೆ 670.

2. ರಾಷ್ಟ್ರೀಯ ಜೈವಾನಿಲ ಘಟಕ ಯೋಜನೆ 9 (ಬಯೋಗ್ಯಾಸ್) ಈ ಕಾರ್ಯಕ್ರಮದಡಿ 2011–12ನೇ ಸಾಲಿಗೆ ಸರ್ಕಾರದಿಂದ ಭೌತಿಕ ಗುರಿ 150 ನಿಗಧಿಪಡಿಸಿದ್ದು, ಸರ್ಕಾರದಿಂದ ರೂ.6.00ಲಕ್ಷ ಬಿಡುಗಡೆಯಾಗಿದ್ದು, ರೂ.6.00ಲಕ್ಷ ವೆಚ್ಚವಾಗಿರುತ್ತದೆ. ಈ ಸಾಲಿನಲ್ಲಿ ಒಟ್ಟು 105 ಜೈವಾನಿಲಗಳ ಸ್ಥಾವರಗಳನ್ನು ನಿರ್ಮಾಣಗೊಳಿಸಿದ್ದು, ಎಲ್ಲವೂ ಬಳಕೆಯಲ್ಲಿರುತ್ತದೆ.

### ವಸತಿ ಯೋಜನೆ:–

ರಾಮನಗರ ಜಿಲ್ಲೆಯ ನೂತನವಾಗಿ ದಿನಾಂಕ:23/08/2007 ರಂದು ಉದಯಿಸಿದ್ದು, 2003–04ನೇ ಸಾಲಿನ (ಜೂನ್) ಸಮೀಕ್ಷೆ ಪ್ರಕಾರ ನಾಲ್ಕು ತಾಲ್ಲೂಕುಗಳ ಗ್ರಾಮೀಣ ಪ್ರದೇಶದಲ್ಲಿ ವಸತಿರಹಿತರ ಸಂಖ್ಯೆ43873 ನಿವೇಶನರಹಿತರ ಸಂಖ್ಯೆ 36687 ಇದ್ದು ಸದರಿ ವಸತಿ/ನಿವೇಶನ ರಹಿತರಿಗೆ ಆಶ್ರಯ ಅಂಬೇಡ್ಕರ್, ಇಂದಿರಾ ಆವಾಜ್ ವಸತಿ ಯೋಜನೆಯಡಿಯಲ್ಲಿ ಮನೆಗಳನ್ನು ಮಂಜೂರಾತಿ ನೀಡಿದ್ದು, ಗ್ರಾಮೀಣ ಪ್ರದೇಶದ ಬಡಜನರ ಮನೆಗಳು ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದೆ. ಅದರಂತೆ ಜಿಲ್ಲೆಗೆ ವಿವಿಧ ವಸತಿ ಯೋಜನೆಗಳಲ್ಲಿ 58041 ಮನೆಗಳು ಮಂಜೂರಾಗಿದ್ದು, ಈಗಾಗಲೇ 25761 ಮನೆಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. ಉಳಿಕೆ ಮನೆಗಳು ವಿವಿಧ ನಿರ್ಮಾಣದ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ.

ಈ ಮನೆಗಳ ನಿರ್ಮಾಣಕ್ಕಾಗಿ ಇದುವರೆವಿಗೆ ರೂ.7812.11ಲಕ್ಷಗಳು ಬಿಡುಗಡೆಯಾಗಿದ್ದು, ರೂ.7812.11ಲಕ್ಷಗಳು ಖರ್ಚಾಗಿರುತ್ತವೆ. ಎಲ್ಲಾ ಮನೆಗಳನ್ನು ಫಲಾನುಭವಿಗಳೆ ಸ್ವತಃ ನಿರ್ಮಿಸಿಕೊಳ್ಳುತ್ತಿದ್ದು, ನಿಯಮಾನುಸಾರ ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲಾಗಿದೆ.

## ವಸತಿ ಯೋಜನೆಯ ಪ್ರಗತಿ ವಿವರ ಮಾಹೆ ಮಾರ್ಚ್–2012

| ಕ್ರ. ಸಂ | ಯೋಜನೆ ಹೆಸರು | ವರ್ಷ | ಭೌತಿಕ ಗುರಿ | ಈ ತಿಂಗಳಲ್ಲಿ ಸಾಧನೆ | ಈವರೆವಿಗೆ ಸಾಧನೆ | ಪ್ರಗತಿ ಯಲ್ಲಿರುವುವು | ಪ್ರಾರಂಭಿ ಸದಿರುವುವು | ಒಟ್ಟು | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1 | ಆಶ್ರಯ ವಸತಿ ಯೋಜನೆ | 2005–06 | 4355 | 19 | 3906 | 318 | 131 | 449 | 975.25 |
| | | 2006–07 | 11121 | 13 | 9464 | 887 | 770 | 1657 | 2879.79 |
| | | 2008–09 | 4958 | 22 | 3594 | 1015 | 349 | 1363 | 1596.54 |
| **ಒಟ್ಟು** | | | **20434** | **54** | **16964** | **2220** | **1250** | **3470** | **5451.58** |
| 2 | ಅಂಬೇಡ್ಕರ್ ವಸತಿ ಯೋಜನೆ | 2005–06 | 467 | 1 | 372 | 45 | 50 | 109 | 76.00 |
| | | 2007–08 | 349 | 0 | 303 | 28 | 18 | 46 | 92.63 |
| | | 2008–09 | 411 | 0 | 317 | 72 | 22 | 94 | 120.18 |
| | | 2009–10 | 200 | 4 | 86 | 65 | 49 | 114 | 46.29 |
| | | 2010–11 | 279 | 1 | 1 | 85 | 193 | 278 | 9.79 |
| **ಒಟ್ಟು** | | | **1706** | **6** | **1079** | **295** | **332** | **641** | **344.89** |
| 3 | ಇಂದಿರಾ ಆವಾಜ್ ವಸತಿ ಯೋಜನೆ | 2005–06 | 503 | 0 | 455 | 35 | 73 | 48 | 116.75 |
| | | 2006–07 | 426 | 2 | 378 | 39 | 9 | 48 | 96.74 |
| | | 2007–08 | 644 | 33 | 597 | 67 | 7 | 74 | 147.87 |
| | | 2008–09 | 1596 | 8 | 1340 | 209 | 47 | 256 | 506.42 |
| | | 2009–10 | 2024 | 30 | 1363 | 410 | 252 | 662 | 585.94 |
| | | 2011–12 | 3631 | 77 | 366 | 1763 | 1517 | 3280 | 262.48 |
| | | 2012–13 | 48 | 0 | 24 | 5 | 19 | 24 | 3.64 |
| **ಒಟ್ಟು** | | | **8872** | **150** | **4523** | **2528** | **1864** | **4392** | **1719.84** |
| 4 | ಗ್ರಾಮೀಣ ಆಶ್ರಯ | 2007–08 | 39 | 2 | 25 | 6 | 8 | 14 | 6.17 |
| 5 | ವಿಶೇಷ ಅಭಿವೃದ್ಧಿ | 2010–11 | 365 | 16 | 35 | 219 | 111 | 330 | 6.42 |
| 6 | ಬಸವ ವಸತಿ | 2010–11 | 24570 | 679 | 2942 | 8026 | 13602 | 21628 | 287.35 |

## ಜಿಲ್ಲಾ ಪಂಚಾಯತ್ ಯೋಜನೆ

ರಾಮನಗರ ಜಿಲ್ಲಾ ಪಂಚಾಯಿತಿಗೆ 2011–12ನೇ ಸಾಲಿನಲ್ಲಿ ಯೋಜನೆಯಡಿಯಲ್ಲಿ 9310.71ಲಕ್ಷ ರೂಗಳು ಬಿಡುಗಡೆಯಾಗಿದ್ದು, ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಟಾನಕ್ಕಾಗಿ ಒಟ್ಟು 7911.89 ವೆಚ್ಚ ಮಾಡುವುದರ ಮೂಲಕ ಶೇಕಡಾ 85% ಪ್ರಗತಿ ಸಾಧಿಸಲಾಗಿದೆ.

## ಗ್ರಾಮ ಸ್ವರಾಜ್ ಯೋಜನೆ

ಡಾ॥ ಡಿ.ಎಂ. ನಂಜುಂಡಪ್ಪನವರ ವರದಿಯ ಪ್ರಕಾರ ಅತೀ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಜಿಲ್ಲೆಯಲ್ಲಿ ಕನಕಪುರ ಮತ್ತು ಮಾಗಡಿ ತಾಲ್ಲೂಕುಗಳು ಆಯ್ಕೆಯಾಗಿದ್ದು, ವಿಶ್ವಬ್ಯಾಂಕ್ ನೆರವಿನಿಂದ ಗ್ರಾಮ ಸ್ವರಾಜ್ ಯೋಜನೆಯು ಮಂಜೂರಾಗಿರುತ್ತದೆ.

ಈ ಯೋಜನೆಯಲ್ಲಿ ಇದುವರೆವಿಗೂ ಒಟ್ಟು ರೂ.2766.02ಲಕ್ಷಗಳು ಬಿಡುಗಡೆಯಾಗಿದ್ದು, ರೂ.2636.17ಲಕ್ಷ ವೆಚ್ಚ ಮಾಡಲಾಗಿರುತ್ತದೆ. 3156 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

# ಸ್ವರ್ಣ ಜಯಂತಿ ಗ್ರಾಮ ಸ್ವರಾಜ್‌ಗಾರ್ ಯೋಜನೆ
## (ಎಸ್.ಜಿ.ಎಸ್.ವೈ)

ಸ್ವರ್ಣ ಜಯಂತಿ ಗ್ರಾಮ ಸ್ವರಾಜ್‌ಗಾರ್ ಯೋಜನೆ ಇದು ಗ್ರಾಮೀಣ ಭಾಗದ ಬಡತನ ರೇಖೆಯಲ್ಲಿರುವ ಫಲಾನುಭವಿಗಳನ್ನು ಆಯ್ಕೆ ಮಾಡಿ ಬಡತನ ನಿರ್ಮೂಲನೆ ಮಾಡುವ ಹಾಗೂ ಗ್ರಾಮೀಣ ಬಡ ಜನರಿಗೆ ನಿರಂತರವಾಗಿ ವರಮಾನವನ್ನು ಒದಗಿಸಬಹುದಾದ ಮಾಹಾತ್ವಾಕಾಂಕ್ಷಿ ಯೋಜನೆಯಾಗಿದೆ.

ಈ ಯೋಜನೆಯು ದಿನಾಂಕ:01/04/1999 ರಿಂದ ರಾಷ್ಟ್ರಾದ್ಯಂತ ಜಾರಿಗೆ ಬಂದಿರುತ್ತದೆ. ಈ ಯೋಜನೆಯಡಿ ಮೂಲತಃವಾಗಿ ಸ್ವಸಹಾಯ ಗುಂಪುಗಳು ಮತ್ತು ಸ್ತ್ರೀಶಕ್ತಿ ಗುಂಪುಗಳಿಗೆ ನೇರವಾಗಿ ಸಾಲ ಸೌಲಭ್ಯ ಮತ್ತು ಸಹಾಯಧನವನ್ನು ನೀಡಿ ಅವರುಗಳನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಿ ಬಡತನ ರೇಖೆಯಿಂದ ಮೇಲೆ ಬಂದು ಕನಿಷ್ಟ ಮಾಸಿಕ ವರಮಾನ ರೂ.2000/–ಗಳು ಬರುವಂತೆ ಮಾಡುವುದು ಯೋಜನೆಯ ಉದ್ದೇಶವಾಗಿದೆ.

ಯೋಜನೆ ಪ್ರಾರಂಭವಾದಂದಿನಿಂದ ವರ್ಷವಾರು ಸಾಕಷ್ಟು ಸ್ವರೋಜ್‌ಗಾರಿಗಳನ್ನು ಈ ಯೋಜನೆಯಡಿ ತೊಡಗಿಸಿಕೊಂಡು ಆರ್ಥಿಕ ಸ್ವಾಲಂಭಿಗಳನ್ನಾಗಿ ಮಾಡಲಾಗಿದೆ.

2011–12ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯ 155 ಸ್ವಸಹಾಯ ಗುಂಪುಗಳಿಗೆ 65 ವೈಯಕ್ತಿಕ ಸ್ವರೋಜ್‌ಗಾರಿಗಳಿಗೆ ಒಟ್ಟು ಗುಂಪು ಮತ್ತು ವೈಯಕ್ತಿಕ 1926 ಸ್ವರೋಜ್‌ಗಾರಿಗಳಿಗೆ ಆರ್ಥಿಕವಾಗಿ ರೂ.161.60ಲಕ್ಷ ಸಹಾಯಧನ ಮತ್ತು ರೂ.565.60ಲಕ್ಷ ಬ್ಯಾಂಕ್ ಸಾಲ ಒಟ್ಟು ರೂ.1131.20ಲಕ್ಷಗಳನ್ನು ಸಾಲ ಮತ್ತು ಸಹಾಯಧನದ ರೂಪದಲ್ಲಿ ಸ್ವರೋಜ್‌ಗಾರಿಗಳಿಗೆ ನೀಡಲಾಗಿದೆ.

ಈ ಯೋಜನೆಯಡಿ ಸ್ವಸಹಾಯ ಗುಂಪುಗಳಿಗೆ ವಿವಿಧ ಚಟುವಟಿಕೆಗಳಾದ ಮಕ್ಕಳ ಮರದ ಆಟಿಕೆ ಸಾಮಾನು ತಯಾರಿಕೆ, ಪುಷ್ಪೋದ್ಯಮ, ರೇಷ್ಮೆ, ತೆಂಗಿನಗರಿ ಉತ್ಪನ್ನ, ಎರೆಹುಳು ಸಾಕಾಣಿಕೆ, ಅಗರಬತ್ತಿ ತಯಾರಿಕೆ, ಹೈನುಗಾರಿಕೆ, ಸಿದ್ದ ಉಡುಪು ತಯಾರಿಕೆ, ಚಿರಾಕೋಟೆ ಲಾವಾಂಚ ಇನ್ನು ಮುಂತಾದ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ರಾಮನಗರ ಜಿಲ್ಲೆಯಿಂದ ದೆಹಲಿ, ಒರಿಸ್ಸಾ ಮತ್ತು ಮುಂಬೈ ರಾಜ್ಯಗಳಲ್ಲಿ ಈ ಸ್ವಸಹಾಯ ಗುಂಪುಗಳು ತಯಾರಿಸಿದ ಉತ್ಪನ್ನಗಳನ್ನು ಮಾರಾಟ ಮತ್ತು ವಸ್ತು ಪ್ರದರ್ಶನದಲ್ಲಿ ಭಾಗವಹಿಸಲಾಗಿವೆ. ಸದರಿ ರಾಜ್ಯಗಳಿಂದ ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಸದರಿ ಪ್ರದರ್ಶನದಲ್ಲಿ ಭಾಗವಹಿಸಿದ್ದರಿಂದ ಇವರುಗಳ ಚಟುವಟಿಕೆಗಳ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗಿರುತ್ತದೆ.

## ರಾಮನಗರ ಜಿಲ್ಲಾ ಪಂಚಾಯತ್

**1ನೇ ಹಂತ** **2012-13ನೇ ಸಾಲಿನ ಪ್ರಥಮ ತ್ರೈಮಾಸಿಕ ಕೆ.ಡಿ.ಪಿ. ಪ್ರಗತಿ ವರದಿ ಮಾರ್ಚ್-2012ರ ಅಂತ್ಯಕ್ಕೆ (ಲಕ್ಷ ರೂ.ಗಳಲ್ಲಿ)**

**ಸುವರ್ಣ ಗ್ರಾಮೋದಯ ಯೋಜನೆ**

| ಕ್ರ. ಸಂ. | ತಾಲ್ಲೂಕು | ಗ್ರಾಮಗಳ ಒಟ್ಟು ಸಂಖ್ಯೆ | ನಿಗದಿಪಡಿ ಸಲಾದ ಒಟ್ಟು ಅನುದಾನ | ಸರ್ಕಾರದಿಂದ ಬಿಡುಗಡೆ ಮಾಡಲಾದ ಒಟ್ಟು ಅನುದಾನ | ವೆಚ್ಚದ ವಿವರ | | | | | |
|---|---|---|---|---|---|---|---|---|---|---|
| | | | | | ಸಿವಿಲ್ ಕಾಮಗಾರಿ | ಗ್ರಾ.ಪಂ. | ತರಬೇತಿ ಬಾಬ್ತು | ಒಟ್ಟು ವೆಚ್ಚ | ಎಸ್.ಸಿ.ಪಿ. ವೆಚ್ಚ | ಟಿ.ಎಸ್.ಪಿ. ವೆಚ್ಚ |
| *1* | *2* | *3* | *4* | *5* | *6* | *7* | *8* | *9* | *10* | *11* |
| 1 | ರಾಮನಗರ | 8 | 419.97 | 366.495 | 234.99 | 61.68 | 41.85 | 338.52 | 31.58 | 15.73 |
| 2 | ಚನ್ನಪಟ್ಟಣ | 7 | 629.930 | 351.495 | 380.36 | 36.79 | 51.65 | 468.80 | 31.58 | 15.73 |
| 3 | ಕನಕಪುರ | 9 | 890.00 | 381.495 | 800.99 | 47.87 | 83.79 | 932.65 | 31.58 | 15.73 |
| 4 | ಮಾಗಡಿ | 10 | 539.96 | 396.495 | 349.07 | 33.15 | 40.74 | 422.96 | 31.58 | 15.73 |
| ನಾಲ್ಕು ತಾಲ್ಲೂಕು ಸೇರಿ ಒಟ್ಟು ಬಿಡುಗಡೆ | | | | 781.21 | 114.28 | | | 114.280 | | |
| **ಒಟ್ಟು** | | **34** | **2479.86** | **2277.19** | **1879.69** | **179.49** | **218.03** | **2277.21** | **126.32** | **62.92** |
| **3ನೇ ಹಂತ:** | | | | | | | | | | |
| 1 | ರಾಮನಗರ | 7 | 420.00 | | | | | | | |
| 2 | ಚನ್ನಪಟ್ಟಣ | 9 | 630.00 | | | | | | | |
| 3 | ಕನಕಪುರ | 22 | 890.00 | | | | | | | |
| 4 | ಮಾಗಡಿ | 15 | 540.00 | | | | | | | |
| ನಾಲ್ಕು ತಾಲ್ಲೂಕು ಸೇರಿ ಒಟ್ಟು ಬಿಡುಗಡೆ | | | | 1967.85 | 1837.91 | | 77.09 | 1915.00 | 140.20 | 81.02 |
| **ಒಟ್ಟು** | | **53** | **2480.00** | **1967.85** | **1837.91** | | **77.09** | **1915.00** | | |
| **1+3 ಒಟ್ಟು** | | **87** | **4959.86** | **4245.04** | **3717.60** | **179.49** | **295.12** | **4192.21** | **266.52** | **143.94** |

# ಸಂಪೂರ್ಣ ಸ್ವಚ್ಛತಾ ಆಂದೋಲನಾ

ಸಂಪೂರ್ಣ ಸ್ವಚ್ಛತಾ ಆಂದೋಲನಾ ಯೋಜನೆಯಡಿ 2011–12ನೇ ಸಾಲಿಗೆ ಬಡತನ ರೇಖೆಗಿಂತ ಮೇಲಿರುವ ಫಲಾನುಭವಿಗಳ ಸಂಖ್ಯೆ:58807, ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳ ಸಂಖ್ಯೆ:41876 ಒಟ್ಟು 1,00683 ಫಲಾನುಭವಿಗಳಾಗಿರುತ್ತಾರೆ. 2011–12ರ ಅಂತ್ಯದ ವೇಳೆಗೆ ಒಟ್ಟು 86285 ಫಲಾನುಭವಿಗಳು ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ.

2011–12ನೇ ಸಾಲಿನಲ್ಲಿ ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು ಹರೀಸಂದ್ರ ಗ್ರಾಮ ಪಂಚಾಯಿತಿ, ಚನ್ನಪಟ್ಟಣ ತಾಲ್ಲೂಕು, ದಶವಾರ ಗ್ರಾಮ ಪಂಚಾಯಿತಿ ಹಾಗೂ ಕನಕಪುರ ತಾಲ್ಲೂಕು ಬೂದಿಗುಪ್ಪೆ ಮತ್ತು ತುಂಗಣಿ ಗ್ರಾಮ ಪಂಚಾಯಿತಿಗಳಿಗೆ ಸಂಪೂರ್ಣ ಸ್ವಚ್ಛತಾ ಆಂದೋಲನಾ ಕಾರ್ಯಕ್ರಮದಲ್ಲಿ ನಿರ್ಮಲ ಗ್ರಾಮ ಪುರಸ್ಕಾರವನ್ನು ಕೇಂದ್ರ ಸರ್ಕಾರದದಿಂದ ಪಡೆದಿರುತ್ತಾರೆ. ಈ ಜಿಲ್ಲೆಯಿಂದ ಎಲಾ ಗ್ರಾಮ ಪಂಚಾಯಿತಿಗಳನ್ನು ಶೌಚಾಲಯ ಮುಕ್ತ ಗ್ರಾಮ ಪಂಚಾಯಿತಿಗಳಾಗಿ ಮಾಡಲು ಕ್ರಮ ವಹಿಸಲಾಯಿತು. ಹಾಗೂ ಇದರ ಬಗ್ಗೆ ಜಾಗೃತಿ ಶಿಬಿರಗಳನ್ನು ನಡೆಸಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

# ಕರವಸೂಲಿ

**ರಾಮನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳ 2012 ಮಾರ್ಚ್ ಮಾಹೆಯ ಅಂತ್ಯಕ್ಕೆ ನೀರಿನ ತಗಾದೆ ವಸೂಲಿ ಬಾಕಿ ತಖ್ತೆ:**

| ಕ್ರ. ಸಂ | ತಾಲ್ಲೂಕು ಪಂಚಾಯಿತಿ | ಗ್ರಾಮ ಪಂಚಾಯಿತಿ ಸಂಖ್ಯೆ | 1–4–10ಕ್ಕೆ ಬಾಕಿ ತಗಾದೆ. | 2011–12ನೇ ಸಾಲಿನ ತಗಾದೆ. | ಒಟ್ಟು ತಗಾದೆ. | ಹಿಂದಿನ ತಿಂಗಳವರೆಗೆ ಒಟ್ಟು ವಸೂಲಿ. | ಚಾಲ್ತಿತಿಂಗಳ ವಸೂಲಿ. | ಒಟ್ಟು ವಸೂಲಿ. | ಬಾಕಿ ತಗಾದೆ. | ಶೇ.ವಾರು. |
|---|---|---|---|---|---|---|---|---|---|---|
| 1 | ಚನ್ನಪಟ್ಟಣ | 32 | 31954468 | 14546800 | 46501268 | 20406776 | 1674534 | 22081310 | 24419958 | **47.49** |
| 2 | ಕನಕಪುರ | 43 | 14184816 | 15775478 | 29960294 | 20406776 | 1332790 | 17264301 | 12695993 | **57.62** |
| 3 | ಮಾಗಡಿ | 32 | 21198399 | 13922428 | 35120827 | 15931511 | 909573 | 20989995 | 14130832 | **59.77** |
| 4 | ರಾಮನಗರ | 23 | 8446978 | 33859760 | 42306738 | 20080422 | 5892565 | 39486529 | 2820209 | **93.33** |
| | ಒಟ್ಟು | 130 | **75784661** | **78104466** | **183889127** | **33593964** | **9809462** | **99822135** | **54066992** | **64.87** |

**ರಾಮನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳ 2012 ಮಾರ್ಚ್ ಮಾಹೆಯ ಅಂತ್ಯಕ್ಕೆ ಡಿ.ಸಿ.ಬಿ ತಗಾದೆ ವಸೂಲಿ ಬಾಕಿ ತಖ್ತೆ:**

| ಕ್ರ. ಸಂ | ತಾಲ್ಲೂಕು ಪಂಚಾಯಿತಿ | ಗ್ರಾಮ ಪಂಚಾಯಿತಿ ಸಂಖ್ಯೆ | 1–4–10ಕ್ಕೆ ಬಾಕಿ ತಗಾದೆ. | 2011–12ನೇ ಸಾಲಿನ ತಗಾದೆ. | ಒಟ್ಟು ತಗಾದೆ. | ಹಿಂದಿನ ತಿಂಗಳವರೆಗೆ ಒಟ್ಟು ವಸೂಲಿ. | ಚಾಲ್ತಿತಿಂಗಳ ವಸೂಲಿ. | ಒಟ್ಟು ವಸೂಲಿ. | ಬಾಕಿ ತಗಾದೆ. | ಶೇ.ವಾರು. |
|---|---|---|---|---|---|---|---|---|---|---|
| 1 | ಚನ್ನಪಟ್ಟಣ | 32 | 16726680 | 5708213 | 22434893 | 6623919 | 477125 | 7101044 | 15333849 | **31.65** |
| 2 | ಕನಕಪುರ | 43 | 26751100 | 9817843 | 36568943 | 12638888 | 1101146 | 13740034 | 22828909 | **37.57** |
| 3 | ಮಾಗಡಿ | 32 | 5655289 | 4162911 | 9818200 | 5117838 | 212070 | 5329908 | 4488292 | **54.29** |
| 4 | ರಾಮನಗರ | 23 | 2896384 | 6640328 | 9536712 | 8163299 | 310877 | 8474176 | 1062536 | **88.86** |
| | ಒಟ್ಟು | 130 | **52029453** | **26329295** | **78358748** | **32543944** | **2101218** | **34645162** | **43713586** | **44.21** |